# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **965** |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 15-12-2023 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಪ್ರಶ್ನೆ | | ಉತ್ತರ |
|---|---|---|
| ಅ) | ರೈತರು ಬೆಳೆದ ಬೆಳೆಗಳ ಸಮೀಕ್ಷೆ ಸರಿಯಾಗಿ ಆಗದಿರುವ ಕಾರಣ ಬೆಳೆ ಸಮೀಕ್ಷೆಯ ಮಾಹಿತಿಯಲ್ಲಿ ರೈತರ ಜಮೀನು ಪಾಳು ಎಂದು ನಮೂದಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು; | ರೈತರು ಬೆಳೆದ ಬೆಳೆಗಳ ಸಮೀಕ್ಷೆ ಮಾಹಿತಿಯಲ್ಲಿ ರೈತರ ಜಮೀನು ಪಾಳು ಎಂದು ಕೆಲವೊಮ್ಮೆ ನಮೂದಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಬೆಳೆ ಸಮೀಕ್ಷೆ ಕೈಗೊಳ್ಳುವ ಸಂದರ್ಭದಲ್ಲಿ ರೈತರ ತಾಕಿಗೆ ಖುದ್ದಾಗಿ ಭೇಟಿ ನೀಡಿ ಬೆಳೆ ಇದ್ದಲ್ಲಿ, ಅಕ್ಷಾಂಶ ರೇಖಾಂಶದೊಂದಿಗೆ ಫೋಟೋ ಸಮೇತ ಬೆಳೆಯ ವಿವರ ದಾಖಲು ಮಾಡಲಾಗುತ್ತಿದೆ. ಮುಂದುವರೆದು, ರೈತರ ತಾಕಿನಲ್ಲಿ ಬೆಳೆ ಬೆಳೆಯದೇ ಪಾಳು ಬಿಟ್ಟಿದ್ದ ಸಂದರ್ಭದಲ್ಲಿ ಆಯಾ ಹಂಗಾಮಿನಲ್ಲಿ "ಪಾಳು" ಎಂದು ನಮೂದಿಸಲಾಗುತ್ತದೆ. |
| ಆ) | ರೈತರ ಜಮೀನಿನಲ್ಲಿ ಬೆಳೆಗಳು ಇದ್ದರೂ ಕೂಡಾ ಬೆಳೆ ಸಮೀಕ್ಷೆಯಲ್ಲಿ ತಪ್ಪಾಗಿ ಪಾಳು ಎಂದು ನಮೂದಾಗುವುದರಿಂದ ರೈತರಿಗೆ ದೊರೆಯುವ ಪರಿಹಾರ ಹಾಗೂ ಇನ್ನಿತರ ಆರ್ಥಿಕ ಉತ್ತೇಜನದಂತಹ ಯೋಜನೆಗಳಿಂದ ಅವರು ವಂಚಿತರಾಗುತ್ತಿದ್ದು; ಇದರಿಂದ ರೈತರಿಗೆ ಅನ್ಯಾಯವೆಸಗಿದಂತೆ ಆಗುವುದಿಲ್ಲವೇ; | ಬೆಳೆ ಸಮೀಕ್ಷೆಯನ್ನು ಮೊಬೈಲ್ ಆಪ್ ಬಳಸಿ ಮಾಡಲಾಗುತ್ತದೆ.<br><br>ಮೊಬೈಲ್ ಆಪ್ ನಲ್ಲಿ Geo Referenced ಗ್ರಾಮ ನಕಾಶೆ ಅಳವಡಿಸಲಾಗಿರುವುದರಿಂದ ಆಯಾ ತಾಕಿನ ಗಡಿ ರೇಖೆಯೊಳಗೆ ಹೋಗಿ ಛಾಯಾಚಿತ್ರದೊಂದಿಗೆ ಬೆಳೆಯ ವಿವರಗಳನ್ನು ದಾಖಲು ಮಾಡಬೇಕಾಗಿರುತ್ತದೆ. ಆದುದರಿಂದ, ಬೆಳೆ ಸಮೀಕ್ಷೆಯ ಮಾಹಿತಿಯು ಸಾಧ್ಯವಾದಷ್ಟು ಮಟ್ಟಿಗೆ ನಿಖರವಾಗಿರುತ್ತದೆ. ಮುಂದುವರೆದು, ಈ ರೀತಿ ದಾಖಲು ಮಾಡಿದ ಬೆಳೆ ವಿವರಗಳನ್ನು ಛಾಯಾಚಿತ್ರದ ಆಧಾರದ ಮೇಲೆ ಮೇಲ್ವಿಚಾರಕರಾದ ಸರ್ಕಾರಿ ಅಧಿಕಾರಿಗಳು (ಕಂದಾಯ, ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ಆರ್ಥಿಕ & ಸಾಂಖಿಕ ಇಲಾಖೆ) ಪರಿಶೀಲನೆ ಮಾಡಿ ಅನುಮೋದಿಸುತ್ತಾರೆ. ಒಂದು ವೇಳೆ ಬೆಳೆ ಮಾಹಿತಿ ತಪ್ಪಾಗಿದ್ದಲ್ಲಿ ರೈತರು ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಆಕ್ಷೇಪಣೆ ನೈಜವಾಗಿದ್ದಲ್ಲಿ ಮರುಸಮೀಕ್ಷೆ ಕೈಗೊಳ್ಳಲಾಗುತ್ತದೆ. ಆದ್ದರಿಂದ, ಬೆಳೆ |

| | | |
|---|---|---|
| | | ಸಮೀಕ್ಷೆಯಲ್ಲಿ ತಪ್ಪಾಗಿ ಪಾಳು ಎಂದು ನಮೂದಾಗಿ ರೈತರಿಗೆ ದೊರೆಯುವ ಪರಿಹಾರ ಹಾಗೂ ಇನ್ನಿತರ ಆರ್ಥಿಕ ಅನ್ಯಾಯವೆಸಗುವ ಸಾಧ್ಯತೆ ಅತೀ ವಿರಳವಾಗಿರುತ್ತದೆ. |
| ಇ) | ಬೆಳೆಯ ವಿವರಗಳು ಪಾಳು ಎಂದು ನಮೂದಾಗಿದ್ದಲ್ಲಿ ಆಕ್ಷೇಪಣೆ ಸಲ್ಲಿಸಿ 2 ತಿಂಗಳು ಕಳೆದರೂ ಕೂಡಾ ಬೆಳೆಗಳ ವಿವರಗಳನ್ನು ಬದಲಾಯಿಸದೇ ಇರುವುದರಿಂದ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಬೆಳೆಗಳ ವಿವರಗಳನ್ನು ದಾಖಲಿಸುವಲ್ಲಿ ವಿಳಂಬ ಮಾಡುತ್ತಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಬೆಳೆಯ ವಿವರಗಳು ಪಾಳು ಎಂದು ನಮೂದಾಗಿದ್ದಲ್ಲಿ ಆಕ್ಷೇಪಣೆ ಸಲ್ಲಿಸಿ 2 ತಿಂಗಳು ಕಳೆದರೂ ಕೂಡಾ ಬೆಳೆಗಳ ವಿವರಗಳನ್ನು ಬದಲಾಯಿಸದೇ ಇರುವುದರಿಂದ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ರೈತರು ಸಲ್ಲಿಸುವ ಪ್ರತಿಯೊಂದು ಆಕ್ಷೇಪಣೆಯನ್ನು ಮೇಲ್ವಿಚಾರಕರು ಪರಿಶೀಲಿಸಿ ಇತ್ಯರ್ಥಪಡಿಸುತ್ತಾರೆ. ಆಕ್ಷೇಪಣೆಗಳು ನೈಜವಾಗಿದ್ದಲ್ಲಿ ಮರುಸಮೀಕ್ಷೆ ಮಾಡಲಾಗುತ್ತದೆ. 2023-24 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 212.63 ಲಕ್ಷ ತಾಕುಗಳ ಪೈಕಿ 1.12 ಲಕ್ಷ ತಾಕುಗಳಿಗೆ (ಶೇ.0.52 ರಷ್ಟು) ಆಕ್ಷೇಪಣೆಗಳು ಸಲ್ಲಿಕೆಯಾಗಿರುತ್ತದೆ. ಅಂತಹ ಆಕ್ಷೇಪಣೆಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಿ ಸಮರ್ಪಕವಲ್ಲದ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುತ್ತದೆ. |
| ಈ) | ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಎಷ್ಟು ಪ್ರತಿಶತಃ ಬೆಳೆ ಸಮೀಕ್ಷೆ ಪೂರ್ಣಗೊಂಡಿದೆ; ರೈತರಿಂದ ಸ್ವೀಕರಿಸಿದ ಆಕ್ಷೇಪಣೆಗಳ ಸಂಖ್ಯೆ ಎಷ್ಟು; ಆಕ್ಷೇಪಣೆಗಳಿಗನುಸಾರ ಬೆಳೆಗಳ ವಿವರ ಬದಲಾವಣೆ ಮಾಡಿರುವ ಮಾಹಿತಿ ನೀಡುವುದು; ಒಂದು ವೇಳೆ ಆಕ್ಷೇಪಣೆಗಳನ್ನು ಸರಿಪಡಿಸದೇ ಇದ್ದಲ್ಲಿ ಸ್ಪಷ್ಟ ಕಾರಣಗಳನ್ನು ನೀಡುವುದು? | ರಾಜ್ಯದಲ್ಲಿ 2023-24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಶೇ.98.08 ರಷ್ಟು ಬೆಳೆ ಸಮೀಕ್ಷೆ ಕೈಗೊಳ್ಳಲಾಗಿರುತ್ತದೆ. ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. 2023-24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 212.63 ಲಕ್ಷ ತಾಕುಗಳ ಸಮೀಕ್ಷೆ ಕೈಗೊಳ್ಳಲಾಗಿದ್ದು ಸ್ವೀಕರಿಸಿದ ಆಕ್ಷೇಪಣೆಗಳ ಪೈಕಿ ಶೇ. 98.52 ರಷ್ಟು ಆಕ್ಷೇಪಣೆಗಳನ್ನು ಸೂಕ್ತ ಬೆಳೆ ಬದಲಾವಣೆಯೊಂದಿಗೆ ಇತ್ಯರ್ಥಪಡಿಸಲಾಗಿದೆ. ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. ರೈತರಿಂದ ಸ್ವೀಕರಿಸಿದ ಆಕ್ಷೇಪಣೆಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಲಾಗಿದೆ. |

*ಸಂಖ್ಯೆ: ಕೃ ಇ 122 ಎಎಂಎಸ್ 2023*

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

| ಅನುಬಂಧ-1<br>2023-24 ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಯ ಜಿಲ್ಲಾವಾರು ಪ್ರಗತಿ ವರದಿ | | | | |
|---|---|---|---|---|
| ಕ್ರ.ಸಂ. | ಜಿಲ್ಲೆ | ಬೆಳೆ ಸಮೀಕ್ಷೆ ಮಾಡಬೇಕಾಗಿರುವ ತಾಕುಗಳು | ಬೆಳೆ ಸಮೀಕ್ಷೆ ಮಾಡಲಾಗಿರುವ ಒಟ್ಟು ತಾಕುಗಳು | % ಪ್ರಗತಿ |
| 1 | ಚಾಮರಾಜನಗರ | 435338 | 387100 | 88.92 |
| 2 | ಕೊಡಗು | 264086 | 240031 | 90.89 |
| 3 | ಉತ್ತರ ಕನ್ನಡ | 594351 | 549762 | 92.50 |
| 4 | ದಕ್ಷಿಣ ಕನ್ನಡ | 861682 | 820730 | 95.25 |
| 5 | ಚಿಕ್ಕಮಗಳೂರು | 589228 | 564467 | 95.80 |
| 6 | ಮಂಡ್ಯ | 1711052 | 1657026 | 96.84 |
| 7 | ಬೆಂಗಳೂರು ನಗರ | 237753 | 230973 | 97.15 |
| 8 | ಮೈಸೂರು | 1053692 | 1026644 | 97.43 |
| 9 | ತುಮಕೂರು | 1757906 | 1719096 | 97.79 |
| 10 | ರಾಮನಗರ | 696932 | 683379 | 98.06 |
| 11 | ಹಾಸನ | 1554190 | 1525583 | 98.16 |
| 12 | ಕೋಲಾರ | 791198 | 778326 | 98.37 |
| 13 | ವಿಜಯಪುರ | 630632 | 620631 | 98.41 |
| 14 | ರಾಯಚೂರು | 666020 | 656318 | 98.54 |
| 15 | ಯಾದಗಿರಿ | 435209 | 430092 | 98.82 |
| 16 | ಬೆಳಗಾವಿ | 1573019 | 1557989 | 99.04 |
| 17 | ಬಾಗಲಕೋಟೆ | 522649 | 517887 | 99.09 |
| 18 | ದಾವಣಗೆರೆ | 482104 | 477730 | 99.09 |
| 19 | ಶಿವಮೊಗ್ಗ | 505166 | 501092 | 99.19 |
| 20 | ಕಲಬುರಗಿ | 714632 | 709141 | 99.23 |
| 21 | ಉಡುಪಿ | 977298 | 970015 | 99.25 |
| 22 | ಬೀದರ | 481058 | 477565 | 99.27 |
| 23 | ಬೆಂಗಳೂರು ಗ್ರಾಮೀಣ | 447966 | 445381 | 99.42 |
| 24 | ಬಳ್ಳಾರಿ | 380888 | 379897 | 99.74 |
| 25 | ಚಿಕ್ಕಬಳ್ಳಾಪುರ | 657503 | 656896 | 99.91 |
| 26 | ಚಿತ್ರದುರ್ಗ | 622749 | 623952 | 100.19 |
| 27 | ಕೊಪ್ಪಳ | 438138 | 439114 | 100.22 |
| 28 | ವಿಜಯನಗರ | 435875 | 437796 | 100.44 |
| 29 | ಧಾರವಾಡ | 329435 | 332267 | 100.86 |
| 30 | ಗದಗ | 325243 | 328192 | 100.91 |
| 31 | ಹಾವೇರಿ | 505977 | 517649 | 102.31 |
| **ಒಟ್ಟು** | | **21678969** | **21262721** | **98.08** |

## ಅನುಬಂಧ-2

### 2023-24 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರೈತರು ಸಲ್ಲಿಸಿರುವ ಆಕ್ಷೇಪಣೆಗಳ ಇತ್ಯರ್ಥಪಡಿಸುವಿಕೆ ಪ್ರಗತಿ ವರದಿ

| ಕ್ರ.ಸಂ. | ಜಿಲ್ಲೆ | ರೈತರಿಂದ ಸ್ವೀಕೃತವಾದ ಆಕ್ಷೇಪಣೆಗಳು | ಮೇಲ್ವಿಚಾರಕರಿಂದ ಪರಿಶೀಲಿಸಲಾಗಿರುವ ಆಕ್ಷೇಪಣೆಗಳ ಸಂಖ್ಯೆ | ಇತ್ಯರ್ಥಪಡಿಸಲು ಬಾಕಿ ಇರುವ ಆಕ್ಷೇಪಣೆಗಳ ಸಂಖ್ಯೆ | % ಪ್ರಗತಿ |
|---|---|---|---|---|---|
| 1 | ಚಿಕ್ಕಬಳ್ಳಾಪುರ | 2634 | 2353 | 281 | 89.33 |
| 2 | ರಾಯಚೂರು | 2546 | 2297 | 249 | 90.22 |
| 3 | ಬೆಂಗಳೂರು ನಗರ | 159 | 145 | 14 | 91.19 |
| 4 | ವಿಜಯಪುರ | 5097 | 4832 | 265 | 94.80 |
| 5 | ಚಿತ್ರದುರ್ಗ | 5135 | 4881 | 254 | 95.05 |
| 6 | ಬೆಂಗಳೂರು ಗ್ರಾಮೀಣ | 2133 | 2029 | 104 | 95.12 |
| 7 | ಬಾಗಲಕೋಟೆ | 1457 | 1389 | 68 | 95.33 |
| 8 | ಚಾಮರಾಜನಗರ | 75 | 72 | 3 | 96.00 |
| 9 | ಶಿವಮೊಗ್ಗ | 1252 | 1219 | 33 | 97.36 |
| 10 | ಮೈಸೂರು | 3640 | 3574 | 66 | 98.19 |
| 11 | ದಾವಣಗೆರೆ | 3638 | 3584 | 54 | 98.52 |
| 12 | ದಕ್ಷಿಣ ಕನ್ನಡ | 580 | 572 | 8 | 98.62 |
| 13 | ಚಿಕ್ಕಮಗಳೂರು | 2750 | 2729 | 21 | 99.24 |
| 14 | ಧಾರವಾಡ | 2998 | 2976 | 22 | 99.27 |
| 15 | ಹಾವೇರಿ | 7823 | 7769 | 54 | 99.31 |
| 16 | ಉತ್ತರ ಕನ್ನಡ | 315 | 313 | 2 | 99.37 |
| 17 | ತುಮಕೂರು | 13714 | 13671 | 43 | 99.69 |
| 18 | ರಾಮನಗರ | 961 | 958 | 3 | 99.69 |
| 19 | ಮಂಡ್ಯ | 21569 | 21503 | 66 | 99.69 |
| 20 | ಕೊಪ್ಪಳ | 2467 | 2460 | 7 | 99.72 |
| 21 | ಹಾಸನ | 13732 | 13694 | 38 | 99.72 |
| 22 | ಗದಗ | 3999 | 3993 | 6 | 99.85 |
| 23 | ಕಲಬುರಗಿ | 3015 | 3011 | 4 | 99.87 |
| 24 | ಬಳ್ಳಾರಿ | 652 | 652 | 0 | 100.00 |
| 25 | ಬೆಳಗಾವಿ | 2133 | 2133 | 0 | 100.00 |
| 26 | ವಿಜಯನಗರ | 4347 | 4347 | 0 | 100.00 |
| 27 | ಕೊಡಗು | 127 | 127 | 0 | 100.00 |
| 28 | ಬೀದರ್ | 224 | 224 | 0 | 100.00 |
| 29 | ಯಾದಗಿರಿ | 2454 | 2454 | 0 | 100.00 |
| 30 | ಕೋಲಾರ | 718 | 718 | 0 | 100.00 |
| 31 | ಉಡುಪಿ | 105 | 105 | 0 | 100.00 |
| | **ಒಟ್ಟು** | **112449** | **110784** | **1665** | **98.52** |